# 3 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ಹಾಗೂ ಸಿಬಿಐ/ಎಸಿಬಿ/ಲೋಕಾಯುಕ್ತ ಪ್ರಕರಣಗಳ ವಿಶೇಷ ನ್ಯಾಯಾಲಯ, ಧಾರವಾಡ ಇವರಲ್ಲಿ

**ಎಸ್.ಸಿ. ನಂ.58/2025**

ಅ.ಸಾ.05

ಚಾ.ಸಾ. 08

| | | |
|---|---|---|
| ಸಾಕ್ಷಿದಾರರ ಹೆಸರು | : | ಈರಪ್ಪ ಕುರುಬಗಟ್ಟಿ |
| ತಂದೆಯ ಹೆಸರು | : | ಬಸಪ್ಪಾ |
| ವಯಸ್ಸು | : | 26 ವರ್ಷಗಳು |
| ಉದ್ಯೋಗ | : | ಶೇತ್ಕಿ |
| ವಾಸಸ್ಥಳ | : | ಕುರುವಿನಕೊಪ್ಪ |
| ಸಾಕ್ಷಿಗೆ ದಿನಾಂಕ | : | **07.05.2026** ರಂದು ಪ್ರಮಾಣ ವಚನ ಬೋಧಿಸಲಾಯಿತು. |

## ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ

01. ನನಗೆ ಆರೋಪಿತರು ಗೊತ್ತು. ಚಾಸಾ-2 ರಿಂದ ಚಾಸಾ-7, 9 ಮತ್ತು 10 ರವರ ಪರಿಚಯ ಇದೆ. ಆರೋಪಿತರು ಹಾಗೂ ಚಾಸಾ-1 ಮತ್ತು 5 ರವರು ಸಂಬಂದಿಕರು. ಅವರ ನಡುವೆ ಯಾವ ರೀತಿಯ ಸಂಬಂಧ ಇದೆ ಗೊತ್ತಿಲ್ಲ. ಅವರ ಜಮೀನುಗಳು ಎಲ್ಲಿ ಇವೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ನಾನು ಯಾರನ್ನೂ ಸಹ ಆಸ್ಪತ್ರೆಗೆ ಕರೆದುಕೊಂಡು ಹೋಗಿರಲಿಲ್ಲ. ಅನುಸೂಯಾ ಮೃತ ಪಟ್ಟಿರುತ್ತಾಳೆ. ಸದರಿ ಅನುಸೂಯಾ ಹೇಗೆ ಮೃತ ಪಟ್ಟಳು ಗೊತ್ತಿಲ್ಲ. ಚಾಸಾ-1 ಮತ್ತು 5

ರವರಿಗೆ ಹೇಗೆ ಗಾಯಗಳು ಆದವು ಗೊತ್ತಿಲ್ಲ. ಪೋಲಿಸರು ನನಗೆ ವಿಚಾರಣೆ ಮಾಡಿಲ್ಲ, ಹೇಳಿಕೆಯನ್ನು ಪಡೆದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ವಿನಂತಿಸುತ್ತಾರೆ. ಸಾಕ್ಷಿ ಹೇಳಿದ ಈ ಮೇಲಿನ ಸಾಕ್ಷ್ಯ ಮತ್ತು ಹೇಳಿಕೆ ಅಂಶಗಳನ್ನು ಪರಿಶೀಲಿಸಿದಾಗ ಸಾಕ್ಷಿಯ ಸಾಕ್ಷ್ಯ ಮತ್ತು ಹೇಳಿಕೆ ಅಂಶಗಳಿಗೆ ವ್ಯತಿರಿಕ್ತ ಇದ್ದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ**

02. ಕುರುವಿನಕೊಪ್ಪ ಗ್ರಾಮದ ಜಮೀನು ರಿ.ಸ. ನಂ.41 ರ ದಾರಿಯ ವಿಷಯವಾಗಿ ಆರೋಪಿತರ ಹಾಗೂ ಫಿರ್ಯಾದಿ ಬಸವರಾಜ @ ಬಸಪ್ಪ ಪಾಟೀಲ ನಡುವೆ ತಂಟೆ ಇರುತ್ತದೆ ಎಂದರೆ ಸರಿಯಲ್ಲ. ದಿಃ 30/12/2024 ರಂದು ಸಾಯಂಕಾಲ 4.00 ಗಂಟೆ ಸುಮಾರಿಗೆ 1 ನೇ ಆರೋಪಿತ ಹಾಗೂ ಚಾಸಾ-1 ರವರ ನಡುವೆ ಜಗಳವಾದ ಬಗ್ಗೆ ತಿಳಿದು ನಾನು, ಚಾಸಾ-2, 6, 7 ಕೂಡಿಕೊಂಡು ಚಾಸಾ-5 ರವರ ಜಮೀನಿಗೆ ಹೋಗಿ ನೋಡಿದಾಗ ಅನುಸೂಯಾ ಇವಳು ರಕ್ತ ಗಾಯ ಹೊಂದಿ ಹೊಲದಲ್ಲಿ ಬಿದ್ದು ಒದ್ದಾಡುತ್ತಿದ್ದು ಅವಳ ಎದೆಗೆ ಮತ್ತು ಹೊಟ್ಟೆಗೆ ಚಾಕುವಿನಿಂದ ಚುಚ್ಚಿದ ಗಾಯಗಳು ಇದ್ದು ಅದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿಯ ಕೈಯಲ್ಲಿ ಬಡಿಗೆ, ಚಾಸಾ-5 ರವರ ಕೈಯಲ್ಲಿ ಬಡಿಗೆ, ಚಾಸಾ-1 ಮತ್ತು 1 ನೇ ಆರೋಪಿಯ ಕೈಯಲ್ಲಿ ಚಾಕು ಇರುವುದನ್ನು ನೋಡಿದ್ದೇನೆ ಎಂದರೆ ಸರಿಯಲ್ಲ. ನಾವು ಆ್ಯಂಬುಲೆನ್ಸಗೆ ಕರೆ ಮಾಡಿ ಅಲ್ಲಿಯೇ ಇದ್ದ ಚಾಸಾ-4 ರವರಿಗೆ ಘಟನೆಯ ಬಗ್ಗೆ ವಿಚಾರಿಸಿದಾಗ ಸಂಜೆ 4 ಗಂಟೆ ಸುಮಾರಿಗೆ 1 ನೇ ಆರೋಪಿತನು ಹೊಲದಲ್ಲಿ ನೀರು ಹಾಯಿಸಿ ಚಾಸಾ-5

ರವರು ಹಾಯದಾಡುವ ದಾರಿಯಲ್ಲಿ ನೀರು ಬಂದು ಚಾಸಾ-1 ಮತ್ತು 5 ರವರಿಗೇ ಓಡಾಡಲು ತೊಂದರೆ ಆಗುತ್ತಿದ್ದು ಆರೋಪಿತರಿಗೆ ಎಷ್ಟು ಹೇಳಿದರು ಕೇಳುತ್ತಿಲ್ಲ ಚಾಸಾ-1 ಮತ್ತು 5 ರವರು 2 ನೇ ಆರೋಪಿ ಹಾಗೂ ಮೃತ ಅನುಸೂಯಾ ಇವರಿಗೆ ಅವಾಚ್ಯವಾಗಿ ಬೈದು ಚಾಸಾ-5 ಬಡಿಗೆಯಿಂದ 2 ನೇ ಆರೋಪಿತನಿಗೆ ಹೊಡೆದಿದ್ದು ಅಲ್ಲಿಯೇ ಇದ್ದ 1 ನೇ ಆರೋಪಿತನಿಗೂ ಸಹ ಚಾಸಾ-5 ರವರು ಕೊಲೆ ಮಾಡುವ ಉದ್ದೇಶದಿಂದ ಬಡಿಗೆಯಿಂದ ರಕ್ತ ಗಾಯ ಪಡಿಸಿದ್ದರು ಎಂದರೆ ಸರಿಯಲ್ಲ. ಆಗ 2 ನೇ ಆರೋಪಿ ಹಾಗೂ ಅನುಸೂಯಾ ಬಿಡಿಸಿಕೊಳ್ಳಲು ಬಂದಾಗ ಚಾಸಾ-1 ಅನುಸೂಯಾ ಇವಳಿಗೆ ಅವಾಚ್ಯವಾಗಿ ಬೈದು ಚಾಕುವಿನಿಂದ ಎದೆಗೆ, ಹೊಟ್ಟೆಗೆ ಚುಚ್ಚಿ ಗಾಯ ಪಡಿಸಿದ್ದು ಆಗ 1 ನೇ ಆರೋಪಿತನು ಕೊಲೆ ಮಾಡುವ ಉದ್ದೇಶದಿಂದ ತನ್ನ ಬಳಿ ಇದ್ದ ಚಾಕುವಿನಿಂದ ಚಾಸಾ-5 ಇವನ ಬೆನ್ನಿಗೆ, ಗದ್ದಕ್ಕೆ ಹಾಗೂ ಎಡ ಪಕ್ಕಡಿಗೆ ಚುಚ್ಚಿ ರಕ್ತ ಗಾಯ ಪಡೆಸಿದ್ದು ಬಿಡಿಸಿಕೊಳ್ಳಲು ಬಂದ ಫಿರ್ಯಾದಿಗೆ ಚಾಕುವಿನಿಂದ ಎರಡೂ ಕೈ ಬೆರಳುಗಳಿಗೆ ಚುಚ್ಚಿ ರಕ್ತಗಾಯಪಡಿಸಿದ್ದು ಅಲ್ಲದೇ 2 ನೇ ಆರೋಪಿತನು ಫಿರ್ಯಾದಿಗೆ ನ್ಯಾಯಾಲಯಂ ಮುಂದೆ ಇರುವ ಬಡಿಗೆಯಿಂದ ಹೊಡೆ ಬಡೆ ಮಾಡಿ, ಕೊಲೆ ಮಾಡಲು ಪ್ರಯತ್ನಿಸಿದ್ದ ಬಗ್ಗೆ ಮತ್ತು ಚಾಸಾ-4 ರವರು ತಂಟೆ ಬಿಡಿಸಿದ್ದು ಆಗ ಆರೋಪಿತರು ಅವಾಚ್ಯವಾಗಿ ಬೈದು ಜೀವದ ಬೆದರಿಕೆ ಹಾಕಿದ ಬಗ್ಗೆ ಚಾಸಾ-4 ರವರು ನಮಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ನಂತರ ಅನುಸೂಯಾ ಇವಳನ್ನು 2 ನೇ ಆರೋಪಿತನು ಎತ್ತಿಕೊಂಡು ರಸ್ತೆಯ ಕಡೆ ಹೋಗುವಷ್ಟರಲ್ಲಿ ಅನುಸೂಯಾ ಮೃತ ಪಟ್ಟಿದ್ದು ನಾನು ಮತ್ತು ಇತರರು ಚಾಸಾ-1, 5 ಹಾಗೂ 1 ನೇ ಆರೋಪಿತರಿಗೆ ಕಿಮ್ಸ

ಆಸ್ಪತ್ರೆ ಹುಬ್ಬಳ್ಳಿಗೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ಈಗ ನಿಪಿ-8 ಎಂದು ಗುರುತಿಲಾಯಿತು. ಆರೋಪಿತರು ಮತ್ತು ದೂರುದಾರರು ದೂರು ಮತ್ತು ಪ್ರತಿದೂರು ದಾಖಲಿಸಿದ್ದು ಈಗ ಅವರು ರಾಜಿ ಆಗಿರುವುದರಿಂದ ನಾನು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಜಿ ಸಿ ಬಿ ವಕೀಲರಿಂದಃ**

**ವಕೀಲರು ಹಾಜರಿದ್ದು, ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆಃ ಇಲ್ಲ.**

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಅದೆ.

**(ಶ್ರೀಮತಿ ಜರೀನಾ)**
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು ಸಿ.ಬಿ.ಐ./ಎ.ಸಿ.ಬಿ.,
ಲೋಕಾಯುಕ್ತ, ಧಾರವಾಡ.